**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**

**ದಿಃ 05.08.2026**

**ಪಾಟೀ ಸವಾಲುಃ ಪ್ರತಿವಾದಿ 1 ರ ಪರ ಶ್ರೀ ಪಿ ಕೆ ಜೆ ವಕೀಲರಿಂದ**

**1.** ನಾನು ಸದರಿ ಪ್ರಸ್ತುತ ವಾದಿ ಮತ್ತು ಪ್ರತಿವಾದಿಗಳ ಕುಟುಂಬದವನಾಗಿರುವುದಿಲ್ಲ. ನಾನು ಇದಕ್ಕಿಂತ ಮೊದಲು ಈ ಪ್ರಸ್ತುತ ದಾವೆಯಲ್ಲಿ ಮರಣ ಶಾಸನ ಪತ್ರದ ಸಾಕ್ಷಿಯಾಗಿ ಹೊರತುಪಡಿಸಿ ಬೇರೆ ಯಾವುದೆ ಸಾಕ್ಷಿ ಹೇಳಲು ಬಂದಿರುವುದಿಲ್ಲ. ನಿಡಿ 14 ರ ನಕಲನ್ನು ಈ ಹಿಂದೆ ಇದೆ ದಾವೆಯಲ್ಲಿ ಹಾಜರುಪಡಿಸಿದ್ದು ಅದು ಯಾರು ಹಾಜರುಪಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯಾದ ಕೆ ಕೆ ಸೋಮಣ್ಣರವರು ವಾದಿ ಮತ್ತು ಪ್ರತಿವಾದಿಗಳ ಕುಟುಂಬದವರಾಗಿರುತ್ತಾರೆ . ನಿಡಿ 50 ನ್ನು ನಾನು ಹಾಜರುಪಡಿಸಿರುವುದಿಲ್ಲ.

2. ನಿಡಿ 50 3 ನೆ ಪ್ರತಿವಾದಿಯವರ ಸ್ವಾದೀನದಲ್ಲಿರುತ್ತದೆ. ನಿಡಿ 50 ನ್ನು ಕರಿಶೆಟ್ಟಿರವರು ಅವರ ಹೆಂಡತಿಯಾದ ತಾಯಮ್ಮರವರ ಹೆಸರಿಗೆ ಬರೆದಿರುತ್ತಾರೆ. ತಾಯಮ್ಮರವರು 3 ನೆ ಪ್ರತಿವಾದಿಯ ತಾಯಿಯಾಗಿರುತ್ತಾರೆ. ನಿಡಿ 50 ಕ್ಕೆ ಶಿವಣ್ಣ , ಮುರಳಿಧರ್ , ಕೆ ಸಿ ಚಂದ್ರ ಮತ್ತು ಹೆಚ್ ಎನ್ ಬಸವರಾಜು ರವರು ಸಹಿ ಹಾಕಿರುತ್ತಾರೆ. ನಿಡಿ 50 ಕ್ಕೆ ನಾನು ಕರಿಶೆಟ್ಟರ್ ರವರ ಮನೆಯಲ್ಲಿ ಸಹಿ ಹಾಕಿರುತ್ತೇನೆ. ಸದರಿ ಮೇಲೆ ಹೇಳಿದ ವ್ಯಕ್ತಿಗಳು ಕರಿಶೆಟ್ಟರ್ ರವರ ಮನೆಯಲ್ಲಿ ಉಪನೊಂದಣಾಧಿಕಾರಿ ಕಚೇರಿಯಿಂದ ಬಂದ ಸಿಬ್ಬಂದಿಗಳ ಸಮಕ್ಷಮ ಸಹಿ ಹಾಕಿರುತ್ತಾರೆ. ಉಪನೊಂದಣಾಧಿಕಾರಿಗಳು ಕರಿಶೆಟ್ಟರ್ ರವರ ಮನೆಗೆ ಬಂದಿರುವುದಿಲ್ಲ.

3. ನಿಡಿ 50 ನ್ನು ಬೇರೆ ಕಡೆ ಬೆರಳಚ್ಚು ಮಾಡಿಸಿ ಕೊಂಡು ತಂದಿರುತ್ತಾರೆ. ನಿಡಿ 50 ನ್ನು ಯಾರು ಬೆರಳಚ್ಚು ಮಾಡಿದರು ಎಂದು ನನಗೆ ಗೊತ್ತಿಲ್ಲ. ನಿಡಿ 50 ರ ಒಕ್ಕಣೆಗಳನ್ನು ಕರಿಶೆಟ್ಟರ್ ರವರು ಸ್ಟ್ಯಾಂಪ್ ವೆಂಡರ್ ಗೆ ಹೇಳಿ ಅವರು ತಯಾರು ಮಾಡಿ ತಂದಿರುತ್ತಾರೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಿಡಿ 50 ನ್ನು ಬರೆಯುವ ಕಾಲಕ್ಕೆ ಕರಿಶೆಟ್ಟರ್ ರವರಿಗೆ ಸಹಿ ಮಾಡಲು ಬರುತ್ತಿತ್ತು ಎಂದರೆ ಸರಿ . ನಿಡಿ 50 ಕ್ಕೆ ಕರಿಶೆಟ್ಟರ್ ರವರು ನನ್ನ ಸಮಕ್ಷಮ ಸಹಿ ಹಾಕಿರುತ್ತಾರೆ. ನಿಡಿ 50 ರ 2 ನೆ ಪುಟದಲ್ಲಿ ಯಾಕೆ ಕರಿಶೆಟ್ಟರ್ ರವರು ಹೆಬ್ಬೆಟ್ಟು ಗುರುತನ್ನು ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಡಿ 1 ರಲ್ಲಿ ಕಾಣುವ ಸಹಿ ಮತ್ತು ಹೆಬ್ಬೆಟ್ಟನ್ನು ಕರಿಶೆಟ್ಟರ್ ರವರು ನನ್ನ ಸಮಕ್ಷಮ ಹಾಕಿರುತ್ತಾರೆ.

4. ನಿಡಿ 50 ಕ್ಕೆ ಯಾಕೆ ಹೆಬ್ಬೆಟ್ಟನ್ನು ಹಾಕುತ್ತಿದ್ದೀರಿ ಎಂದು ಕರಿಶೆಟ್ಟರ್ ರವರನ್ನು ನಾನು ಕೇಳಿರುವುದಿಲ್ಲ. ನಿಡಿ 50 ರ ಮೊದಲನೆ ಪುಟದ ಹಿಂಬದಿಯಲ್ಲಿ ಹಾಕಿರುವ ನಿಡಿ 50 ( ಸಿ) ಮತ್ತು ( ಡಿ ) ಮತ್ತು ನಿಡಿ 50 ರ 2 ನೆ ಪುಟದಲ್ಲಿ ಇರುವ ನಿಡಿ 50 (ಇ) ಸಹಿಗಳಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಿಡಿ 50 ನ್ನು ಮಾಡಬೇಕಾದರೆ ತಾಯಮ್ಮರವರು ಅಲ್ಲೆ ಇದ್ದರು. ನಿಡಿ 50 ನ್ನು ಮಾಡಬೇಕಾದರೆ ಪ್ರತಿವಾದಿ 1 ರವರು ಅಲ್ಲೆ ಇದ್ದರು. ನಿಡಿ 50 ರಲ್ಲಿ ಪ್ರತಿವಾದಿ 1 ರವರು ಸಹಿ ಹಾಕಿರುವುದಿಲ್ಲ. ನಿಡಿ 50 ನ್ನು ಬರೆದ ಪತ್ರಬರಹಗಾರರು ಈಗ ಬದುಕಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ದಿಃ 10.08.1985 ರಂದು ಕರಿಶೆಟ್ಟರ್ ರವರು ಮರಣ ಹೊಂದಿರುತ್ತಾರೆ . ನನ್ನ ಬಳಿ ಸದರಿ

ಕರಿಶೆಟ್ಟರ್ ರವರು ದಿಃ 10.08.1985 ರಂದು ರಂದು ಮರಣ ಹೊಂದಿರತ್ತಾರೆ ಎಂದು ತೋರಿಸಲು ನನ್ನ ಬಳಿ ಯಾವುದೆ ದಾಖಲಾತಿ ಇರುವುದಿಲ್ಲ.

5. ಕರಿಶೆಟ್ಟರ್ ರವರು ದಿಃ 10.08.1984 ರಂದು ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ ದಿಃ 10.08.1984 ರಂದು ಮರಣ ಹೊಂದಿರುವ ಕಾರಣ ನಿಡಿ 50 ನ್ನು ಮಾಡುವ ಕಾಲಕ್ಕೆ ದಿಃ 30.07.1985 ಕ್ಕೆ ಅವರು ಜೀವಂತ ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು ಮತ್ತು ಬಸವರಾಜು ಮತ್ತು ಸಾಕ್ಷಿಗಳು ಎಲ್ಲಾರು ನಿಡಿ 50 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸರ್ವೆ ನಂ 57/1 ರ 11 ಸೆಂಟ್ , ಸರ್ವೆ ನಂ 52 ರ 33 X 75 ಅಡಿ ಜಾಗ ಯಾರ ಸ್ವಾದೀನದಲ್ಲಿರುತ್ತದೆ ಎಂದರೆ ಸಾಕ್ಷಿಯು ಸರ್ವೆ ನಂ 52 ರ 33 X 25 ಅಡಿ ಜಾಗ 3 ನೆ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದು ನುಡಿದರು. ಸರ್ವೆ ನಂ 57/1 ಪ್ರಸ್ತುತ ಪ್ರತಿವಾದಿ 5 ಮತ್ತು 6 ರವರ ಸ್ವಾದೀನದಲ್ಲಿರುತ್ತದೆ .

6. ಪ್ರತಿವಾದಿ 5 ರವರು ಪ್ರತಿವಾದಿ 3 ರವರ ಹೆಂಡತಿ ಪ್ರತಿವಾದಿ 6 ರವರು ನನ್ನ ಹೆಂಡತಿ ಎಂದರೆ ಸರಿ . ನಿಡಿ 50 ರ ಆದಾರದ ಮೇಲೆ ಪ್ರತಿವಾದಿ 5 ಮತ್ತು 6 ರವರ ಹೆಸರಿನಲ್ಲಿ ಯಾವುದೆ ಖಾತೆ ವರ್ಗಾವಣೆಯಾಗಿವುದಿಲ್ಲ. ಪ್ರತಿವಾದಿ 6 ರವರು ಪ್ರತಿವಾದಿ 5 ರವರಿಂದ ಸರ್ವೆ ನಂ 57/1 ವಿಸ್ತೀರ್ಣ 11 ಸೆಂಟ್ ಜಾಗವನ್ನು ಖರೀದಿ ಮಾಡಿರುತ್ತಾರೆ . ಪ್ರತಿವಾದಿ 5 ರವರು ತಾಯಮ್ಮರವರ ಸೊಸೆ .ತಾಯಮ್ಮರವರು ನಿಡಿ 50 ರಆದಾರದ

ಮೇಲೆ ಪ್ರತಿವಾದಿ 5 ರರಿಗೆ ಸರ್ವೆ ನಂ 57/1 ವಿಸ್ತೀರ್ಣ 11 ಸೆಂಟ್ ಜಾಗವನ್ನು ಕ್ರಯ ಮಾಡಿರುತ್ತಾರೆ.

7. ಕರಿಶೆಟ್ಟಿ ರವರು ಯಾವುದೆ ವಿಲ್ ನ್ನು ಬರೆಯದ ಕಾರಣ ಈವರೆಗೂ ಸರ್ವೆ ನಂ 57/1 ವಿಸ್ತೀರ್ಣ 11 ಸೆಂಟ್ ಮತ್ತು ಸರ್ವೆ ನಂ 52 ರ 33 X 25 ಅಡಿ ಜಾಗ ಈಗಲು ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿಯಲ್ಲ. ಕರಿಶೆಟ್ಟಿ ರವರು ಇಲ್ಲದ ಕಾರಣ ಉಪನೊಂದಣಾದಿಕಾರಿಯ ಕಚೇರಿಯ ಸಿಬ್ಬಂದಿಯವರಿಗೆ ಬೇರೆಯವರನ್ನು ತೋರಿಸಿ ಕರಿಶೆಟ್ಟಿ ಎಂದು ತಿಳಿಸಿರುತ್ತೇವೆ ಎಂದರೆ ಸರಿಯಲ್ಲ. ಈ ರೀತಿ ಬೇರೆಯವರನ್ನು ತೋರಿಸಿ ಅವರ ಹೆಬ್ಬಟ್ಟಿನ ಸಹಿಯನ್ನು ನಿಡಿ 50 ರಲ್ಲಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆ ಸಮಯದಲ್ಲಿ 1 ನೆ ಪ್ರತಿವಾದಿಯವರು ಇದ್ದರು ಎಂದು ನುಡಿದರು. ನಿಡಿ 50 ರ ಕಾಣುವ ಸಹಿಗಳು ಕರಿಶೆಟ್ಟಿರವರದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 3 ರಿಂದ 6 ನೆ ಪ್ರತಿವಾದಿಯವರು ಕರಿಶೆಟ್ಟಿ ರವರ ಕುಟುಂಬದ ಬೇರೆ ಸದಸ್ಯರಿಗೆ ಮೋಸ ಮಾಡುವ ಉದ್ದೇಶದಿಂದ ನಿಡಿ 50 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ